ಕಚೇರಿ ಪ್ರತಿ

## ಪ್ರಾರಂಭಿಕ ಪ್ರಮಾಣ ಪತ್ರ

ದಿನಾಂಕ:26/5/15

ಸಂಖ್ಯೆ: ಆಯೋಪ್ರಾ/ಸಿಸಿ/129/2015-16

ಶ್ರೀಮತಿ ಲಲಿತಾ, ಇವರು ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿ, ಹರಪನಹಳ್ಳಿ ಗ್ರಾಮದ ಸ.ನಂ.113ರಲ್ಲಿನ 02ಎಕರೆ ಪ್ರದೇಶಕ್ಕೆ ಅನುಮೋದಿಸಿದ ಒಂಟಿ ನಿವೇಶನ ನಕ್ಷೆಯಲ್ಲಿನ ಖಾತಾ ಸಂಖ್ಯೆ:150200100401804215 ಸ್ವತ್ತಿನ ಸಂಖ್ಯೆ:125/113ರಲ್ಲಿನ ನೆಲ ಮತ್ತು ಮೇಲಿನ ಎರಡು ಮಹಡಿಗಳ ಒಟ್ಟು 8786.71ಚ.ಮೀ. ವಿಸ್ತೀರ್ಣದಲ್ಲಿ ಒಟ್ಟು 38ಘಟಕಗಳ ವಸತಿ ಕಟ್ಟಡ ನಿರ್ಮಾಣಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಅನುಮೋದನಾ ಶುಲ್ಕ ರೂ.46,000/- ಡಿ.ಡಿ.ನಂ.505882 ಹಾಗೂ ಭದ್ರತಾ ಠೇವಣಿ ಶುಲ್ಕ ರೂ.4,40,000/- ಡಿ.ಡಿ. ನಂ.505881ಗಳ ರಸೀದಿ ಸಂಖ್ಯೆ:954824 ದಿನಾಂಕ:25-05-2015ರಂದು ಪಾವತಿಸಲಾಗಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್15(1)ರನ್ವಯ ಈ ಕೆಳಕಂಡ ಷರತ್ತುಗೊಳಪಡಿಸಿ ಪ್ರಾರಂಭಿಕ ಪ್ರಮಾಣ ಪತ್ರ ನೀಡಿದೆ.

### ಷರತ್ತುಗಳು

1) ಮೇಲ್ಕಂಡ ನಿವೇಶನದಲ್ಲಿ ಕಟ್ಟುವ ಕಟ್ಟಡವನ್ನು ಈ ಕಛೇರಿಯಿಂದ ಅನುಮತಿ ನೀಡಿದಂತೆ ವಸತಿ ಉಪಯೋಗಕ್ಕೆ ಮಾತ್ರ ಉಪಯೋಗಿಸತಕ್ಕದ್ದು, ಮತ್ತು ಕಟ್ಟಡವನ್ನು ಅನುಮೋದಿತ ನಕ್ಷೆಯಂತೆ ಕಟ್ಟಡ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಬಗ್ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 15(1)ರಡಿ ನೀಡಲಾಗಿರುವ ಪ್ರಾರಂಭಿಕ ಪ್ರಮಾಣ ಪತ್ರವಾಗಿರುತ್ತದೆ.
3) ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ನಿಯೋಜಿಸಿಕೊಳ್ಳತಕ್ಕದಲ್ಲ.
4) ಕಟ್ಟಡ ನಿರ್ಮಾಣಕ್ಕೆ ಜಾರಿಯಲ್ಲಿರುವ ವಲಯ ನಿಯಮಾವಳಿಗಳು ಮತ್ತು ಕಟ್ಟಡದ, ವಿಧಿಗಳ ನಿಬಂಧನೆಗಳಿಗೆ ಅನುಗುಣವಾಗಿರತಕ್ಕದ್ದು.
5) ಈ ಪ್ರಾರಂಭಿಕ ಪ್ರಮಾಣ ಪತ್ರವು **ಮಂಜೂರಾದ ದಿನಾಂಕದಿಂದ ಎರಡು ವರ್ಷದವರೆಗೆ ಮಾತ್ರ ಮಾನ್ಯತೆ ಹೊಂದಿರುತ್ತದೆ.** ಈ ಅವಧಿ ಮುಗಿದ ನಂತರ ಹೊಸದಾಗಿ ಪ್ರಾರಂಭಿಕ ಪ್ರಮಾಣ ಪತ್ರ ಪಡೆಯದೆ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಹಾಗೂ ಮುಂದುವರೆಸಬಾರದು.
6) ಅನುಮೋದಿತ ನಕ್ಷೆಯನ್ನು ಉಲ್ಲಂಘಿಸಿ ಕಟ್ಟಡ ಕಾರ್ಯವನ್ನು ಕೈಗೊಳ್ಳಬಾರದು ಮತ್ತು ಏನಾದರೂ ಬದಲಾವಣೆಗಳು ಅವಶ್ಯವಿದ್ದಲ್ಲಿ ಮಾರ್ಪಾಡಿತ ನಕ್ಷೆಗೆ ಮಂಜೂರಾತಿ ಪಡೆದು ಮುಂದುವರೆಸತಕ್ಕದ್ದು.
7) ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.
8) ಪ್ರಸ್ತಾವಿತ ಪ್ರದೇಶದ ಸುತ್ತಲೂ ಬರುವ ನಡುಭಾಗಗಳಲ್ಲಿ ಕಡ್ಡಾಯವಾಗಿ ಮರಗಳನ್ನು ಬೆಳೆಸತಕ್ಕದ್ದು.
9) ಕಟ್ಟಡ ನಿರ್ಮಾಣ ಸಾಮಾಗ್ರಿಗಳನ್ನು ರಸ್ತೆಯಲ್ಲಿ/ಚರಂಡಿ ಮೇಲೆ ಅಥವಾ ಯಾವುದೇ ಸಾರ್ವಜನಿಕ ಪ್ರದೇಶದಲ್ಲಿ ಶೇಖರಣೆ ಮಾಡಬಾರದು,ಈ ಬಗ್ಗೆ ಕಂಡು ಬಂದಲ್ಲಿ ಪ್ರಾರಂಭಿಕ ಪ್ರಮಾಣ ಪತ್ರವನ್ನು ರದ್ದುಪಡಿಸಲಾಗುವುದು.
10) ನಿವೇಶನದ ಆವರಣದೊಳಗೆ ಮಳೆ ನೀರಿನ ಕೊಯ್ಲಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳತಕ್ಕದ್ದು.
11) ಈ ನಿವೇಶನದ ಬಗ್ಗೆ ಏನಾದರೂ ಸಿವಿಲ್ ವ್ಯಾಜ್ಯಗಳು ಉದ್ಭವಿಸಿದಲ್ಲಿ ನ್ಯಾಯಾಲಯದ ತೀರ್ಮಾನಕ್ಕೆ ನೀವು ಬದ್ಧರಾಗಿರತಕ್ಕದ್ದು.

26/5/15

ಮು.ತಿ.ನೋ...

12) ಪ್ರಸ್ತಾವಿತ ನಿವೇಶನವು ಯಾವುದೇ ಭೂಸ್ವಾಧೀನಕ್ಕೆ ಒಳಪಟ್ಟಿದ್ದಲ್ಲಿ ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.

13) ಸೋಲಾರ್ ವಾಟರ್ ಹೀಟರ್‌ನ್ನು ಕಟ್ಟಡದಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.

14) ಯಾವುದೇ ಸಿವಿಲ್ ವ್ಯಾಜ್ಯಗಳಿದ್ದಲ್ಲಿ, ನ್ಯಾಯಾಲಯದ ಆದೇಶಕ್ಕೆ ಬದ್ಧರಾಗಿರುವ, ಸುಳ್ಳು ಮಾಹಿತಿ ಅಥವಾ ಸಲ್ಲಿಸಿರುವ ಯಾವುದೇ ಮಾಹಿತಿ/ದಾಖಲೆಗಳು, ತಪ್ಪಾಗಿದ್ದಲ್ಲಿ/ಫೋರ್ಜರಿ ಆಗಿದ್ದಲ್ಲಿ/ ಷರತ್ತುಗಳನ್ನು ಉಲ್ಲಂಘಿಸಿದ್ದಲ್ಲಿ ಕಟ್ಟಡ ನಕ್ಷೆ ಅನುಮೋದನೆಯು ಸ್ವಯಂಚಾಲಿತವಾಗಿ ರದ್ದಾಗುವ ನಿಬಂಧನೆ -ಗೊಳ್ಳಪಟ್ಟಿರುತ್ತದೆ.

15) ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭಿಸುವ ಮುನ್ನ ಕಲ್ಲುಬಾಳು ಗ್ರಾಮ ಪಂಚಾಯಿತಿಯಿಂದ ಪರವಾನಗೆಯನ್ನು ಪಡೆಯತಕ್ಕದ್ದು.

16) ಕಟ್ಟಡ ಕಾಮಗಾರಿಗಳನ್ನು ಪ್ರಾರಂಭಿಸುವ ಮೊದಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣಾ ಮಂಡಳಿ ಪತ್ರ ಸಂಖ್ಯೆ:PCB/312/CNP/14/ H 1457 ದಿನಾಂಕ:14-01-2015ರಲ್ಲಿನ ನಿಬಂಧನೆಗಳನ್ನು ಚಾಚುತಪ್ಪದೇ ಪಾಲಿಸತಕ್ಕದ್ದು.

17) ಅನುಮೋದಿತ ನಕ್ಷೆಯ ವಿವರಗಳು ಈ ಕೆಳಕಂಡಂತಿದೆ;.

| ಖಾಲಿಜಾಗ | ವಲಯ ನಿಯಮಾವಳಿಯಂತೆ | ನಕ್ಷೆಯಂತೆ |
|---|---|---|
| ಮುಂಭಾಗ | 5.00 ಮೀ. | 5.00 ಮೀ. |
| ಹಿಂಭಾಗ | 5.00 ಮೀ. | 5.00 ಮೀ. |
| ಎಡಭಾಗ | 5.00 ಮೀ. | 5.00 ಮೀ. |
| ಬಲಭಾಗ | 5.00 ಮೀ. | 6.801 ಮೀ. |
| ಅನುಪಾತ (F.A.R.) | 1.50 | 0.98 |
| ಕಟ್ಟಡದ ಅಂತಸ್ತುಗಳು | - | ನೆಲ ಮತ್ತು ಮೇಲಿನ ಎರಡು ಮಹಡಿಗಳು ಮಾತ್ರ |
| ವಾಹನ ನಿಲುಗಡೆ ಜಾಗ | 42No's | 42No's |
| ಕಟ್ಟಡದ ಎತ್ತರ | 15.00ಮೀ. ವರೆಗೆ | 9.30ಮೀ. |

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್15(4)ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.

"ದೃಢೀಕೃತ ನಕಲು"

ನಗರ ಮತ್ತು ಗ್ರಾಮಾಂತರ ಯೋಜನಾ
ಸಹಾಯಕ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ
ನಿರ್ದೇಶಕರು ಹಾಗೂ ಸದಸ್ಯ- ಕಾರ್ಯದರ್ಶಿ,
ಆನೇಕಲ್ ಯೋಜನಾ ಪ್ರಾಧಿಕಾರ,
ಆನೇಕಲ್.

ಇವರಿಗೆ, **ಶ್ರೀಮತಿ ಲಲಿತಾ,**
ನಂ.244, 3ನೇ ಕ್ರಾಸ್, 4ನೇ ಮೈನ್,
3ನೇ ಹಂತ, ಜೆ.ಪಿ.ನಗರ, ಬೆಂಗಳೂರು.

**ಯಥಾಪ್ರತಿಯನ್ನು:** 1) ಕಾರ್ಯದರ್ಶಿಗಳು, ಕಲ್ಲುಬಾಳು ಗ್ರಾಮ ಪಂಚಾಯಿತಿ, ಆನೇಕಲ್ ತಾಲ್ಲೂಕು, ಇವರಿಗೆ ನಾಲ್ಕು ಕಟ್ಟಡ ನಕ್ಷೆಯ ಪ್ರತಿಗಳೊಂದಿಗೆ ಕಳುಹಿಸಿದೆ. 2) ಕಛೇರಿ ಪ್ರತಿ.